Doc No. T-P-2

Reg No. B G 155 15-7-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಲಂಡನ್ನಿನಲ್ಲಿ ಒಂದು ಲಕ್ಷ ನೌಕರರ ಮುಷ್ಕರ

ಸ್ಪೀಕರ್ ಸ್ಥಾನಕ್ಕೆ ರಾಜೀನಾಮೆ

★

ನವದೆಹಲಿ— ರಾಷ್ಟ್ರಾಧ್ಯಕ್ಷತೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಆಯ್ಕೆಯಾಗಿರುವ ಶ್ರೀ ಸಂಜೀವರೆಡ್ಡಿಯವರು ಲೋಕಸಭಾ ಸ್ಪೀಕರ್ ಸ್ಥಾನಕ್ಕೆ ರಾಜೀನಾಮೆ ಕೊಡುವರಾಗಿ ತಿಳಿಸಿಪರು.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರೆವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು. ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ. ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಗೇರುವನೆಂದು ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಅದ್ಭುತ ಕಾರ್ಯ

ಅಹಮದಾಬಾದು— ಚೀಣಾದೊಡನೆ ಪರಮಾಣುವಿನಲ್ಲಿ ಸರಿಸಮಾನವಾಗಲು ಭಾರತವು 10 ವರ್ಷಗಳ ಕಾಲದಲ್ಲಿ ರೂ. 500 ಕೋಟಿಯಿಂದ 1000 ಕೋಟಿ ಖರ್ಚುಮಾಡಬೇಕೆಂದು ರಕ್ಷಣಾ ವ್ಯಾಸಂಗ ಸಂಸ್ಥೆ ಡೈರೆಕ್ಟರ್ ಡಾ|| ಸುಬ್ರಹ್ಮಣ್ಯಂ ಹೇಳಿದರು.

★

ಮಿಷನರಿ ವಿದ್ಯಾಸಂಸ್ಥೆಗಳು

ನವದೆಹಲಿ— ಪಾಕಿಸ್ತಾನದಲ್ಲಿ ವಿದೇಶೀ ಮಿಷನರಿಗಳು ನಡೆಸುತ್ತಿರುವ ಎಲ್ಲಾ ವಿದ್ಯಾಸಂಸ್ಥೆಗಳನ್ನೂ ಸರಕಾರವು ವಹಿಸಿಕೊಳ್ಳಲು ನಿರ್ಧರಿಸಿದೆ.

●

ಪ್ರಾಣಾರ್ಪಣೆ!

ಮೋಗಾ— ಪಂಜಾಬು ಸರಕಾರದಲ್ಲಿ ಹಿಂದಿಗೆ ಆಗುತ್ತಿರುವ ಅನ್ಯಾಯವನ್ನು ಪರಿಪೂರ್ಣವಾಗಿದ್ದರೆ ತಾವು ಆಗಸ್ಟ್ 1 ರಿಂದ ಬೈಠಕ್ ಸತ್ಯಾಗ್ರಹ ಪ್ರಾರಂಭಿಸಿ, ನಂತರ ಆಮರಣಾಂತ ಉಪವಾಸ ಕೈಗೊಳ್ಳುವುದಾಗಿ ಪಂಜಾಬು ವಿಧಾನ ಪರಿಷತ್ತಿನ ಕಾಂಗ್ರೆಸ್ ಪಾರ್ಟಿ ನಾಯಕ ಶ್ರೀ ಹಂಸರಾಜ್ ಶೆರ್ವಾಣಿ ಬೆದರಿಕೆ ಹಾಕಿರುವರು.

★

ಪ್ರತಿಬಟನೆ

ತಂಜಾವೂರು— ಇಲ್ಲಿಯ ಭೂಮಾಲೀಕರು ಟ್ರಾಕ್ಟರುಗಳನ್ನು ಉಪಯೋಗಿಸುವುದನ್ನು ಪ್ರತಿಭಟಿಸಿ ಕಮ್ಯೂನಿಸ್ಟು ಮಾರ್ಕ್ಸಿಸ್ಟು ಕಿಸಾನ್ ಸಭೆಯವರು ಜುಲೈ 25 ರಿಂದ 6 ದಿನಗಳು ಪ್ರದರ್ಶನ ನಡೆಸುವರು.

★

ಅಧ್ಯಕ್ಷತೆಗೆ ಕಾಂಗ್ರೆಸ್ ಸ್ಪರ್ಧಿ ಆಯ್ಕೆ ನಂತರದ ಜಿಜ್ಞಾಸೆ

ನವದೆಹಲಿ— ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಸ್ಪರ್ಧಿ ಆಯ್ಕೆ ಬಗ್ಗೆ ಹುಟ್ಟಿದ ಒಡಕಿನ ನಂತರ ಬೆಂಗಳೂರಿನಿಂದ ವಾಪಸ್ಸಾದ ಪ್ರಧಾನಿ ಇಂದಿರಾರವರು ಮಂತ್ರಿಮಂಡಲದ ತಮ್ಮ ಸಹೋದ್ಯೋಗಳು ಕೆಲವರೊಡನೆ ಪ್ರತ್ಯೇಕ ಪ್ರತ್ಯೇಕವಾಗಿ ಮಾತುಕತೆ ನಡೆಸಿದರು — ಇವರೊಡನೆ ಮಾತನಾಡಿದ ಶ್ರೀಷಾ ಮಂತ್ರಿಗಳು ನಂತರ ಶ್ರೀ ಮೊರಾರ್ಜಿ ದೇಸಾಯಿ ಮತ್ತು ಶ್ರೀ ಫಕ್ರುದ್ದೀನ್ ಅಲ್ಲಿ ಅಹಮದ್‌ರೊಡನೆ ಮಾತುಕತೆ ನಡೆಸಿದರು — ವಿಷಯ ಬಹಿರಂಗವಾಗಿಲ್ಲ.

5 ಸಾವಿರ

ಕಾರ್ಮಿಕರಿಂದ ಪಿಕೆಟ್

ತಿರುವೇಂದ್ರ— ಸರಕಾರಿ ಭೂಮಿ ಹಂಚಿಕೆ, ಕನಿಷ್ಠ ಕೂಲಿ, ವಸತಿ ಸೌಕರ್ಯ, ಸರಕಾರಿ ಕೆಲಸ ಪೂರೈಯಲು, ಒತ್ತಾಯ ಮಾಡುವದಕ್ಕಾಗಿ ಕಮ್ಯೂನಿಸ್ಟರ ಮುಂದಾಳತ್ವದಲ್ಲಿ 5000 ವ್ಯವಸಾಯ ಕಾರ್ಮಿಕರು ನಿನ್ನೆ ವಿವಿಧ ಸರ್ಕಾರಿ ಆಫೀಸುಗಳ ಮುಂದೆ ಪಿಕೆಟ್ ಮಾಡಿದರು.

★

1 ಲಕ್ಷ ನೌಕರರ ಮುಷ್ಕರ

ಲಂಡನ್— ಸಂಬಳ ಮತ್ತು ಉತ್ಪಾದನೆ ಬಗ್ಗೆ ಹೋರಾಡುತ್ತಿರುವ 1 ಲಕ್ಷ ಪ್ರೋಸ್ಟಲ್ ಎಂಜಿನೀಯರರು ನಿನ್ನೆ 24 ಗಂಟೆ ಮುಷ್ಕರ ನಡೆಸಿದರು.

★

ಡೆಲ್ಲಿಯಲ್ಲಿ ಪುಟ್ಟ ವೈಟ್ ಹೌಸ್

ನವದೆಹಲಿ— ಅಮೇರಿಕಾ ಅಧ್ಯಕ್ಷರ ಭೇಟಿ ಸಂದರ್ಭದಲ್ಲಿ, ಅಮೇರಿಕಾ ವೈಟ್ ಹೌಸ್ ಮಾದರಿಯ ಪುಟ್ಟ ಕಟ್ಟಡ ನಿರ್ಮಿಸಲಾಗುತ್ತಿದೆ

ಭಿನಂದನೆ

ಬೆಂಗಳೂರು— ಏ ಐ ಸಿ ಸಿ ಅಧಿವೇಶನದಲ್ಲಿ ಶಾಂತಿ ಶಿಸ್ತು ಪಾಲನೆಯಲ್ಲಿ ಪೋಲೀಸರಿಗೆ ನೆರವು ನೀಡಿದ ರಾಜ್ಯದ ವಿವಿಧ ಭಾಗದ 600 ಹೋಂಗಾರ್ಡುಗಳನ್ನು ಪ್ರದೇಶ-ಕಾಂಗ್ರೆಸ್ ಸಮಿತಿ ಅಭಿನಂದಿಸಿತು: ಅವರ ಸೇವೆಯನ್ನು ಅಧ್ಯಕ್ಷ ಡಾ|| ನಾಗಪ್ಪ ಆಳ್ವಾರೂ, ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರೂ ಪ್ರಶಂಸಿಸಿದರು.

★

ರೂ. 1108

ಟಿಕೇಟಿಲ್ಲದ ಪ್ರಯಾಣಿಕರಿಂದ ವಸೂಲಿ

ಚಿಕ್ಕಬಳ್ಳಾಪುರ— ಯಲಹಂಕಾ-ಚಿಂತಾಮಣಿ ರೈಲು ದೊಡ್ಡಜಂಲಾ ಹತ್ತಿರ ಶನಿವಾರ 2 ಗಂಟೆ ಕಾಲ ನಿಲ್ಲಿಸಲ್ಪಟ್ಟಿತು — ರೈಲಿನಲ್ಲಿದ್ದ ಟಿಕೇಟಿಲ್ಲದ ಮದುವೆ ತಂಡದವರಿಗೂ ಟಿಕೇಟು ಚೆಕ್ಕ್ ತಂಡದವರಿ ನಡೆದ ಜಗಳವೇ ಕಾರಣ — 107 ಜನರಿದ್ದ ಈ ತಂಡದಿಂದ ಟೀಕೇಟು ಚಾರ್ಜು ಮತ್ತು ದಂಡವಾಗಿ ರೂ 1108 ವಸೂಲ್ಮಾಡಲಾಯಿತು.

★

ಭಾರತ್ ಏಕ್

ಬೊಂಬಾಯಿ— ಭಾರತ್ ಏಕ್ (ಒಂದು ಭಾರತ) ಎಂಬ ಪಕ್ಷಾತೀತ ಸಂಸ್ಥೆ ರಿಜಿಸ್ಟರು ಮಾಡಲ್ಪಟ್ಟಿತು — ಭಾಷಾವ್ಯಾರು ರಾಜ್ಯಗಳ ಬದಲು ಅಭಿವೃದ್ಧಿ ಮತ್ತು ರಕ್ಷಣಾ ಅನುಕೂಲದ ಆಡಳಿತ ರಾಜ್ಯಗಳ ಸ್ಥಾಪನೆ ಇದರ ಆಶಯ.

★

ಬಂಜರ ಭೂಮಿ ಆಕ್ರಮಣ

ಅನಂತಪುರ— ಬುಕ್ಕೇಡು ಗ್ರಾಮದ 256 ಎಕ್ರೆ ಬಂಜರು ಭೂಮಿಯನ್ನು ಕ್ರಾಂತಿ ಕಮ್ಯೂನಿಸ್ಟು ಪಾರ್ಟಿಯ 500 ಮಂದಿ ಕಾರ್ಮಿಕರು ಬಲಾತ್ಕಾರದಿಂದ ಆಕ್ರಮಿಸಿದರು.

ಕಾಂಗ್ರೆಸ್‌ಗೆ ವಿಜಯ

ಹೈದರಾದು— ಅನಂತಪುರ ಕ್ಷೇತ್ರದಿಂದ ಶಾಸನ ಸಭಾ ಸ್ಥಾನವು ಕಾಂಗ್ರೆಸಿಗೆ ದೊರೆಯಿತು.

ಡಾ ॥ ಮೋದಿ

ನೇತ್ರದಾನಿ ಪದ್ಮಭೂಷಣ ಡಾ ॥ ಮೋದಿಯವರು ಜಪಾನಿನಿಂದ ಅಮೇರಿಕಾಕ್ಕೆ ಹೋಗಿ ಅಲ್ಲಿಂದ ಭಾರತಕ್ಕೆ ಆಗಸ್ಟು ಪ್ರಥಮವಾರದಲ್ಲಿ ವಾಪಸ್ಸಾಗುವರು.

ರಾಜ್ಯ ಭೂಮಾಲೀಕರ ಸಮ್ಮೇಳನ

ಇದೇ 20 ನೇ ತಾರೀಖು ಭಾನುವಾರ ಮೈಸೂರಿನಲ್ಲಿ ನಡೆಯುವ ರಾಜ್ಯ ಭೂಮಾಲೀಕರ ಸಮ್ಮೇಳನಕ್ಕೆ ಬರುವ ಪ್ರತಿನಿಧಿಗಳಿಗೆ ಪುರಭವನದ ಬಳಿ ಇರುವ ಕಾವೇರಿ ಪಟ್ಟಣ ಸುಬ್ರಾಯಶೆಟ್ಟರ ಛತ್ರದಲ್ಲಿ ಊಟ ಮತ್ತು ವಸತಿ ಸೌಕರ್ಯಗಳನ್ನು ಏರ್ಪಡಿಸಲಾಗಿದೆ. ಸಮ್ಮೇಳನದಲ್ಲಿ ಚರ್ಚಿಸಬೇಕಾದ ವಿಷಯಗಳು ಇದೇ 16 ನೆ ತಾರೀಖಿನೊಳಗೆ ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ದಿವ್ಯವಾಣಿ

ದೇವರು, ಎಲ್ಲೆಲ್ಲೂ ಅದರ ಮೆಧ್ಯೆ ಇರುವ ಮತ್ತು ಅದರ ಸುತ್ತಳತೆ ಎಲ್ಲೂ ಇರದ ಒಂದು ಚಕ್ರ. — ಎಂಪೆಡೋಕಲ್ಸ್

— — —

5 ದಿನಗಳಲ್ಲಿ 7 ಅಂತಸ್ತಿನ ಮನೆ ಸಿದ್ಧ

ಪಶ್ಚಿಮ ಜರ್ಮನಿ ಹ್ಯಾಂಬರ್ಗಿನ ಮಧ್ಯ ಭಾಗದಲ್ಲಿ 7 ಅಂತಸ್ತಿನ ಭಾರೀ ಆಫೀಸುಕಟ್ಟಡವು 5 ದಿನಗಳಲ್ಲಿ 60 ಕೆಲಸಗಾರರಿಂದ ಕಟ್ಟಲ್ಪಟ್ಟಿತು : ಸಿದ್ಧಪಡಿಸಿ ತಯಾರಿಸಿದ ಕಟ್ಟಡ ಭಾಗಗಳು ಉಪಯೋಗಿಸಲ್ಪಟ್ಟವು : ಅಂತಸ್ತು ಅಂತಸ್ತು ಆಂತಸ್ತು ಮುಗಿದೊಡನೆ ಆಲ್ಲಿ ನೀರಿನ ವಿದ್ಯುಚ್ಛಕ್ತಿಯ ಏರ್ಪಾಡೂ, ಸುಣ್ಣಬಣ್ಣ ಲಿಫ್ಟ್ ಏರ್ಪಾಡು ಮುಗಿಸಲಾಗುತ್ತಿತ್ತು. ಕೆಲಸದ 5 ದಿನಗಳಲ್ಲಿ ಹೆಂಡಸಾರಾಯಿ ಕುಡಿಯದಿದ್ದ ಕೆಲಸಗಾರರು ಕಟ್ಟಡ ಮುಗಿದೊಡನೆ ಆನಂದದಿಂದ ಕುಡಿದರು.



Protect the Cow

ಗೋರಕ್ಷಣೆಗೆ ಬೆಂಬಲ ನೀಡಿ

SHAKTI SUDHA

A Superb Tonic

ಅನೋಘ 2 ನೇ ವಾರ

ವುಡ್‌ಲ್ಯಾಂಡ್ಸ್

ಉತ್ತರ ಭಾರತವಲ್ಲಿ ಕೋಲಾಹಲ ಎಬ್ಬಿಸಿರುವ ಅನೇಕ ಆಶ್ಚರ್ಯ ವಿಷಯಗಳಿಂದ ಕೂಡಿದ ಅತ್ಯಮೋಘ ಹಿಂದಿ ಚಿತ್ರ ನೀವು ನೋಡಲು ತಪ್ಪಿಸಿರಿ

ಅನೋಖಿರಾತ್

ಸಂಗೀತ — ರೋರ್ಷ

ತಾರಾಗಣ : ಸಂಜೀವ ಕುಮಾರ್ ಜಹೀದ ತರುಣ ಬೋಸ್ ಮುಖ್ರಿ ಮುಂತಾದವರು

[ದಿನ 3 ಪ್ರದರ್ಶನಗಳು]

ಆಪೆರಾ__ 11-7-69 ರಿಂದ

ಅಮೋಘ ಆಕರ್ಷಣೀಯ ಕನ್ನಡ ಚಿತ್ರ — ಕಥೆ-ಸಂಭಾಷಣೆ : ತ. ರಾ..ಸು.

ಪುನರ್ಜನ್ಮ

ನಟವರ್ಗ— ರಾಜಕುಮಾರ್, ಬಾಲಕೃಷ್ಣ, ಜಯಂತಿ, ಚಂದ್ರಕಲಾ ಜಯಶ್ರೀ, ರಮಾ, ರಂಗ, ಸತ್ಯ

ದಿನ 3 ಆಟಗಳು

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah Sri Madhav Shenoi, Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Help The Gorakshana

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata V. S Krishna Rao (Proprietor) at the Satyavadi Press Chamarajapuram, Mysore 4